ಹಹಹಹ... ಸೋ... ಯಂಗ್ ಆಗಿರೊ ನಿಮಗಿಂತ ವಯಸ್ಸಲ್ಲಿ ಕಿರಿಯವನಾಗಿರುವ ಹುಡುಗನನ್ನು ಆರಿಸಿ ಮದುವೆಯಾಗಿ... ವಿ ಕೆನ್ ರೈಡ್ ಹಿಮ್ ಫಿಸಿಕಲಿ ಅನ್ ಮೆಂಟಲಿ... ಹಹಹಹ.

ಎಮಿಲಿ ಜೆಸ್ಸಿ ಟೈಲರ್ ಹೇಳಿದ ಮಾತುಗಳು ಅವಳೊಳಗೆ ಸಣ್ಣ ನಡುಕವನ್ನು ತಂದಿದ್ದು ಸುಳ್ಳಲ್ಲ. ಅವಳ ಗಟ್ಟಿ ಹೃದಯದೊಳಗೆ ಚೂರು ಭಯ ಮುತ್ತಿಕೊಂಡಿತು ಎಂದೂ ಹೇಳಬಹುದು. ಊಟ ಮುಗಿಸಿ ಎಮಿಲಿ ಇತರರೊಂದಿಗೆ ಮಾತನಾಡುತ್ತಿರುವಾಗ ಅವಳ ಜೊತೆಯೇ ಇರಬೇಕೆನಿಸಿತು ಶೋಭಾಳಿಗೆ. ಅವಳ ಮಾತು, ನೋಟಗಳು ಆತ್ಮೀಯ ಎನಿಸಿತು. ತನ್ನ ಆಪ್ತ ಸ್ನೇಹಿತೆಯೇನೊ ಎನ್ನುವಷ್ಟರ ಮಟ್ಟಿಗೆ ಮಾತನಾಡಿದ ಆಕೆಯ ಮಾತುಗಳು ಶೋಭಾಳ ಎದೆಯಲ್ಲಿ ರಿಂಗಣಿಸುತ್ತಿತ್ತು; ಮನಸ್ಸು ಅವಳ ಸಾಮೀಪ್ಯ ಬಯಸುತ್ತಿತ್ತು.

ಅವರೆಲ್ಲರೂ ಶಾಲೆಯ ಸ್ಪರ್ಧೆಗಳ ಬಗ್ಗೆ ಚರ್ಚಿಸುತ್ತಿದ್ದರು. ಶಾಲೆಯಲ್ಲಿದ್ದ ಎರಡು ಗುಂಪು ಗಳಲ್ಲಿ ಯಾವುದಕ್ಕೂ ಸೇರದೆ ತಟಸ್ಥವಾಗಿದ್ದ ಶೋಭಾ ಈ ಬರ್ತ್‌ಡೇ ಪಾರ್ಟಿಯ ನೆಪದಲ್ಲಿ ಒಟ್ಟುಗೂಡಿ ಕೆಲವರು ತಮ್ಮ ಗುಂಪಿನ ಕಾರ್ಯ ತಂತ್ರಗಳನ್ನು ಹೆಣೆಯುತ್ತಿದ್ದುದನ್ನು ದೂರ ಇದ್ದೇ ಗಮನಿಸುತ್ತಿದ್ದಳು. ಎಮಿಲಿಯೊಂದಿಗೆ ಹೊರಡುವ ಎಂದು ತೀರ್ಮಾನಿಸಿ ಅವಳ ನಿರ್ಗಮನಕ್ಕಾಗಿ ಕಾಯುತ್ತಿದ್ದಳು. ಹೊಸದಾಗಿ ಬಂದಿರುವ ಮಾಥ್ಯೂ ಶಿವರಾಜ್ ಸಿಂಗ್ ಎಂಬ ಮಾಸ್ತರನ ಪ್ರಸ್ತಾಪ ಬಂದು ಆತ ಒಳ್ಳೆಯ ಹಾಡುಗಾರನೆಂತಲೂ ಈ ಬಾರಿಯೂ ನೀವು ಗೆಲ್ಲುವುದು ಕಷ್ಟ ಎಂದಳು ಇಂಗ್ಲೆಂಡಿನ ಎಮಿಲಿ ಜೆಸ್ಸಿ ಟೈಲರ್. ಆ ಸುದ್ದಿಯ ಕೇಳಿದ್ದೇ ಎಲ್ಲರ ಜಂಘಾಬಲವೇ ಕುಸಿದು ಹೋಯಿತು. ಸ್ಪರ್ಧೆಗಳಿಗಿಂತ ಮುಂಚೆಯೇ ಸೋಲನ್ನು ಒಪ್ಪಿಕೊಂಡಂತೆ ಅವರು ಚಡಪಡಿಸಿದರು. ಇದನ್ನು ನೋಡಿ ಅಥವಾ ಮಾಥ್ಯೂ ಶಿವರಾಜ್ ಸಿಂಗ್ ಎಂಬ ತಮಿಳುನಾಡಿನ ತಿರುನಲ್ವೇಲಿ ಕಡೆಯ ಹೊಸ ಮಾಸ್ತರನ ಗಂಡಸುತನವನ್ನು ಸೋಲಿಸಬೇಕೆಂಬ ನಿರ್ಧಾರದಲ್ಲೊ ಏನೋ ಒಟ್ಟಿನಲ್ಲಿ ಶೋಭಾಳ ಎದೆಯೊಳಗೆ ಕಿಚ್ಚು ಹತ್ತಿದಂತಾಗಿ ಮೆಲ್ಲಗಿನ ದನಿಯಲ್ಲಿ ಹಾಡಲು ಶುರುಮಾಡಿದಳು. ಎಲ್ಲರೂ ಗಾಬರಿ ಬಿದ್ದು ಅವಳ ಕಡೆ ತಿರುಗಿ ಬೆಚ್ಚಿ ಬಿದ್ದು ಸಂತಸದ ಅಲೆಗಳಲಿ ತೇಲಿದ್ದರು. ಅಲ್ಲಿದ್ದವರ ಒತ್ತಾಯದಂತೆಯೇ ಸ್ಪರ್ಧೆಯಲ್ಲಿ ಈ ಗುಂಪಿನೊಂದಿಗೆ ಇರುತ್ತೇನೆಂದು ಭರವಸೆ ನೀಡಿ ದೂರದಲ್ಲಿ ಹೋಗುತ್ತಿರುವ ಎಮಿಲಿಯನ್ನು ಕಂಡು ಆಕೆ ಹೋದ ದಿಕ್ಕಿನಲ್ಲಿ ಲಗುಬಗನೆ ಓಡಿದಳು. ತಿರುವು ರಸ್ತೆಯಲ್ಲಿ ಆಕೆ ಕಾಣದೆ ಹಾಗೇ ನಿಂತಾಗ ಕತ್ತಲಲ್ಲಿ ಆಕೆ ಮಾತನಾಡುತ್ತಿರುವ ದನಿ ಕೇಳಿದಂತಾಗಿ ಅತ್ತ ನಡೆಯುತ್ತಾ ಶೋಭಾ ಮಿಸ್ ಎಮಿಲಿ... ಆರ್ ಯು ದೇರ್? ಎಂದು ಕೇಳುತ್ತಾ ಮೊಬೈಲ್‌ನಲ್ಲಿ ಟಾರ್ಚ್ ಹಾಕಿಕೊಂಡು ಹುಡುಕಿದಳು. ಎಲ್ಲೂ ಆಕೆ ಕಾಣಲಿಲ್ಲ.

ಇಷ್ಟು ಬೇಗ ರೂಮಿಗೆ ಹೋಗಿಬಿಟ್ಟಳೆ!? ತಾನು ಹಾಡುತ್ತಿರುವಾಗ ಅವಳ ಮುಖ ಬಾಡಿದಂತಿತ್ತು... ಯಾಕೆ? ಭಾಷೆ ಅರ್ಥವಾಗದಿದ್ದರೂ ಭಾವ ಅರ್ಥವಾಗಿ ತನ್ನ ಜೀವನದ ಯಾವುದಾದರೂ ಘಟನೆಯೊಂದನ್ನು ರಾಗದೊಂದಿಗೆ ತಳಕು ಹಾಕಿಕೊಂಡು ನೋವುಂಡಳೇ!? ಅಥವಾ... ಆ ಹೊಸ ಮೇಷ್ಟ್ರು ಮಾಥ್ಯೂ ಶಿವರಾಜ್ ಸಿಂಗ್ ಎಂಬುವವನನ್ನು ಪ್ರೀತಿಸುತ್ತಿದ್ದು ತಾನು ಅವನಿಗಿಂತ ಚೆಂದ ಹಾಡುತ್ತೇನೆಂದು ಮತ್ಸರಗೊಂಡಳೇ? ಏನೊಂದೂ ಅರ್ಥವಾಗ್ತಿಲ್ಲ... ಆದರೆ ಆಕೆ ಹೇಳಿದ ವಿಷಯಗಳು ನನ್ನೊಳಗೆ ಏನನ್ನೋ ಕೆದಕಿದಂತಿವೆ... ಬಹುಶಃ ಆ ಪೋಸ್ಟ್ ಮಾಸ್ತರನ ನೆನಪನ್ನೇ...?

ಬಿರ್ರನೆ ತನ್ನ ರೂಮಿಗೆ ಬಂದು ಮಂಚದ



ಮೇಲೆ ದೇಹವ ಹಾಕಿದಳು. ಎದೆ ಜೋರಾಗಿ ಬಡಿದುಕೊಳ್ಳುತ್ತಿತ್ತು.

ಫೇಸ್‌ಬುಕ್‌ನಲ್ಲಿ ಬ್ಲಾಕ್ ಮಾಡಿದ್ದ ಪೋಸ್ಟ್ ಮಾಸ್ತರ್ ಅವಳ ಕಂಗಳಲ್ಲೀಗ ಎಣ್ಣೆ ಸುರಿದು ಬತ್ತಿ ಹೊಸೆದ. ಅವನ ಅಕೌಂಟ್‌ನ್ನು ತಡಕಾಡಿದಳು. ಅರೆ! ಇದೇನಿದು? ಆತನ ಕೊನೆಯ ಪೋಸ್ಟ್ ಎರಡು ವರ್ಷಗಳ ಹಿಂದೆ? ಫೇಸ್‌ಬುಕ್‌ನ್ನು ಉಪಯೋಗಿಸುವುದ ಬಿಟ್ಟುಬಿಟ್ಟನೇ ಅಥವಾ ...? ಛೇ ಛೇ... ಹಾಗಿರಲು ಸಾಧ್ಯವೇ ಇಲ್ಲ... ಇನ್ನೂ ಚಿಕ್ಕ ವಯಸ್ಸು... ನನಗಿಂತ ಎರಡ್ಮೂರು ವರ್ಷ ದೊಡ್ಡವನಷ್ಟೇ... ಮೆಸೆಂಜರ್‌ನಲ್ಲಿ ಮೂರು ವರ್ಷಗಳ ಹಿಂದೆ ನೀಡಿದ್ದ ಸಂಖ್ಯೆಗೆ ಪ್ರಯತ್ನಿಸಿದಳು. ನಂಬರ್ ಉಪಯೋಗದಲ್ಲಿಲ್ಲ ಎಂದು ಬಂತು; ಆತನನ್ನು ಸಂಪರ್ಕಿಸುವ ಬಗೆ ಎಂತು?

ಮಾರನೆಯ ದಿನ ತನ್ನ ಹಳೆಯ ಸಹೋದ್ಯೋಗಿ ಗಣಿತ ಮೇಷ್ಟ್ರು ಈಶ್ವರನ ಮೊಬೈಲ್ ನಂಬರ್ ಸಿಕ್ಕಿದ್ದು ಅವಳಿಗೆ ಅಪಾರ ಸಂತಸ ತಂದಿತ್ತು. ಆತನಿಗೆ ಮಾತ್ರ ಆ ಸುರಸುಂದರಾಂಗ ಪೋಸ್ಟ್ ಮಾಸ್ತರ್‌ನ ಸಂಪರ್ಕ ಇರುವುದು... ಮಧ್ಯಾಹ್ನ ಶಾಲೆ ಮುಗಿದದ್ದೇ ಯಾರೂ ಇಲ್ಲದನ್ನು ಖಾತ್ರಿ ಪಡಿಸಿಕೊಂಡು ಸ್ಟಾಫ್ ರೂಮಿನಲ್ಲೇ ಕೂತು ಈಶ್ವರ್‌ಗೆ ಕರೆ ಮಾಡಿದಳು. ಆತನ ಮೂಲಕ ಪೋಸ್ಟ್‌ಮಾಸ್ತರ್‌ನನ್ನು ಹಿಡಿಯಲೇ ಬೇಕು...

ಹಲೋ... ನಮಸ್ತೆ... ಇದು ಈಶ್ವರ್ ಸರ್ ಅವರ ನಂಬರ್ ತಾನೇ?

ಆ ಕಡೆಯಿಂದ ಹೆಣ್ಣಿನ ಧ್ವನಿ. ಬಹುಶಃ ಈಶ್ವರ್ ಹೆಂಡತಿಯೇ ಇರಬೇಕು... ಮೇಡಮ್, ನನ್ನ ಹೆಸರು ... ನನ್ನ ಹೆಸರು ರೂಪ... ಈಶ್ವರ್ ಸರ್ ಅವರ ಕೊಲೀಗ್... ಸರ್ ಇದಾರಾ? ಫೋನ್ ಕೊಡ್ತೀರ ಸ್ವಲ್ಪ... ಇಂಪರ್ಟೆಂಟಾಗಿ ಅವರ ಜೊತೆ ಮಾತಾಡಬೇಕು...

ಆ ಕಡೆಯಿಂದ ಬಂದ ಉತ್ತರವನ್ನು ಕೇಳಿ ಇವಳು ಬೆಚ್ಚಿ ಬಿದ್ದಳು. ಕರೆಯನ್ನು ತುಂಡರಿಸಿ ನಡುಗುತ್ತಾ ನಿಂತಳು. ಕುಸಿದು ಬಿದ್ದಂತಾಗಿ ತಲೆಯನ್ನು ಹಿಡಿದುಕೊಂಡು ಹಾಗೇ ಕೂತಳು.

ದೂರದ ಕಡಲಲೆಯ ಸದ್ದು ಸ್ಪಷ್ಟವಾಗಿ ಅವಳ ಕಿವಿಗಳಲ್ಲಿ ಕೆನೆಯುತ್ತಿತ್ತು. ಉಸಿರ ಜೋರಾಗಿ ಹೊರ ತಳ್ಳುತ್ತಾ ಸಟ್ಟನೆದ್ದು ಕಡಲ ಕಡೆ ನಡೆಯತೊಡಗಿದಳು.

ಕತ್ತಲ ದಾರಿ ಅವಳ ಮನಸ್ಸಿಗೆ ಹಿತವೆನಿಸಿತು.

ಪ್ರತಿಕ್ರಿಯಿಸಿ: feedback@sudha.co.in